ದಿನಾಂಕಃ 15.06.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 4 ನೇ ಪ್ರತಿವಾದಿ ಪರ ಶ್ರೀ ಡಿ.ಎಸ್. ವಕೀಲರಿಂದ:**

13. ನನಗೆ ಈಗ 24 ವರ್ಷ ವಯಸ್ಸು. 4 ನೇ ಪ್ರತಿವಾದಿಯ ಪರಿಚಯ ನನಗಿಲ್ಲ. 4 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿದ ನಂತರ ನೀವು, ನಿಮ್ಮ ತಂದೆ ತಾಯಿ ಮತ್ತು ತಮ್ಮ ಸೇರಿ 4 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುವ ಕ್ರಯಪತ್ರ ಹಾಜರುಮಾಡಿದ್ದೀರ ಎಂದರೆ ಸಾಕ್ಷಿಯು ಮಾರಾಟ ಮಾಡಿರುವ ವಿಚಾರ ತಮಗೆ ಗೊತ್ತಿಲ್ಲದಿರುವ ಕಾರಣ ನಾವು ಮಾರಾಟ ಮಾಡಿದ್ದೀವ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಜಮೀನುಗಳನ್ನು ಅವರು 4 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುವ ಬಾಬ್ತು ಬಂದ ಹಣದಲ್ಲಿ ಖರೀದಿಸಿದ್ದರು ಎಂದರೆ ಸರಿ. ನೀವು ಮತ್ತು 2 ನೇ ವಾದಿ ಅಪ್ರಾಪ್ತ ವಯಸ್ಕರಾಗಿದ್ದ ಸಮಯದಲ್ಲಿ ತಮ್ಮಿಬ್ಬರನ್ನು ಒಳಗೊಂಡಂತೆ 1 ಮತ್ತು 2 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಜಮೀನುಗಳಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು ಮಾರಾಟ ಮಾಡಿರುವ ವಿಚಾರ ತಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

14. 2 ನೇ ಪ್ರತಿವಾದಿ ನನ್ನನ್ನು ಮತ್ತು 2 ನೇ ವಾದಿಯ ಪೋಷಕ ಪ್ರತಿನಿಧಿಯಾಗಿ 4 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ತಮಗೂ ಮತ್ತು 2 ನೇ ಪ್ರತಿವಾದಿಗೂ ಹೇಳದೇ ಮಾರಾಟ ಮಾಡಿದ್ದಾರೆ ಎಂದು ಸಾಕ್ಷಿಯು ನುಡಿಯುತಾರೆ. ಅಪ್ರಾಪ್ತರಾಗಿದ್ದ ನಿಮ್ಮ ಹಾಗೂ 2 ನೇ ವಾದಿಯ ಭವಿಷ್ಯಕ್ಕಾಗಿ ಹಾಗೂ ಕುಟುಂಬದ ಒಳಿತಿಗಾಗಿ 1 ಮತ್ತು 2 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದರಿಂದ ತಮಗೆ ಏನೂ ಸಿಕ್ಕಿಲ್ಲ ಎಂದು ನುಡಿಯುತ್ತಾರೆ. ನಾನು 2013 ರಿಂದ 2018 ರವರೆಗೆ ಗೋಣೀಕೊಪ್ಪದ ಕಾಫ್ಸ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. 2013 ರಲ್ಲಿ ನನಗೆ 13 ವರ್ಷ ವಯಸ್ಸು. 2013 ಕ್ಕೂ ಮುನ್ನ ನಾನು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೆ. ನಾನು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ನನ್ನ ತಾಯಿ ಪಿ.ಜಿ. ನಡೆಸುತ್ತಿದ್ದರು ಎಂದರೆ ಸರಿ.

15. 2011 ರಲ್ಲಿ ನೀವು, 2 ನೇ ವಾದಿ, 1 ಮತ್ತು 2 ನೇ ಪ್ರತಿವಾದಿಗಳು ಸೇರಿ 4 ನೇ ಪ್ರತಿವಾದಿಯ ತಂದೆ ಕೆ.ಎಸ್.ಮಂಜೇಗೌಡ ರವರಿಗೆ ಕರಾರು ಪತ್ರ ಮಾಡಿ ಹಣ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ತಮಗೆ ಯಾವುದೇ ಹಣ ಬಂದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ದಾವ ಐಟಂ.ನಂ.1 ರಿಂದ 3 ರ ಜಮೀನುಗಳನ್ನು 4 ನೇ ಪ್ರತಿವಾದಿಯ ತಂದೆ ಮಂಜೇಗೌಡರವರಿಂದ ಪಡೆದ ಹಣದಲ್ಲಿ ದಿ.22.05.2011 ರ ನೋಂದಾಯಿತ ಕ್ರಯಪತ್ರದಂತೆ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಬಿ.ಎಸ್.ಯೋಗೇಶ್ ಬಿನ್ ಸತ್ಯನಾರಾಯಣ,

ಭದ್ರಾವತಿ ರವರಿಗೆ ರೂ.9 ಲಕ್ಷ ಹಣ ಕೊಟ್ಟು ದಿ.28.05.2011 ರಂದು ನೋಂದಾಯಿತ ಕರಾರು ಪತ್ರ ಸಂ.411/2012-13 ವನ್ನು ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ತಂದೆಯಿಂದ ಪಡೆದುಕೊಂಡ ಹಣದಿಂದಲೇ 1 ನೇ ಪ್ರತಿವಾದಿ ಮೇಲೆ ಹೇಳಿರುವ ಕ್ರಯ ಪಡೆದಿದ್ದು ಅದೇಹಣದಿಂದಲೇ 2 ನೇ ಪ್ರತಿವಾದಿ ಮೇಲೆ ಹೇಳಿರುವ ಕರಾರು ಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

16. 4 ನೇ ಪ್ರತಿವಾದಿಯ ತಂದೆಯಿಂದ ಪಡೆದುಕೊಂಡ ಹಣದಿಂದಲೇ 2 ನೇ ಪ್ರತಿವಾದಿ ಬೆಂಗಳೂರಿನ ಬಿಟಿಎಂ ಲೇಔಟ್ ನಲ್ಲಿ ಪಿ.ಜಿ. ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ತಮಗೆ ಯಾವುದೇ ಮೂಲದಿಂದ ಹಣ ಬಂದಿಲ್ಲ ಎಂದು ನುಡಿಯುತ್ತಾರೆ. ನಿಡಿ-2(ಎ) ನನ್ನ ತಾಯಿಯ ಸಹಿ ಎಂದರೆ ಸರಿ. 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಜಮೀನುಗಳನ್ನು ಖರೀದಿಸಲಾಗಿದೆ ಎಂದು ಹೇಳಿ 2 ನೇ ಪ್ರತಿವಾದಿ ತಹಶೀಲ್ದಾರ್ ರವರಿಗೆ ನಿಡಿ-2 ರ ಪತ್ರ ಬರೆದಿದ್ದಾರೆ ಎಂದರೆ ಸರಿ. ಆದ್ದರಿಂದ 4 ನೇ ಪ್ರತಿವಾದಿ ಹೆಸರಿನಲ್ಲಿರುವ ದಾವಾ ಐಟಂ.ನಂ.4 ರಿಂದ 11 ರ ಜಮೀನುಗಳ ಮೇಲೆ ನನಗಾಗಲೀ 2 ನೇ ವಾದಿಗಾಗಲೀ ಅಧಿಕಾರ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು 2 ನೇ ವಾದಿಗೆ ದಾವ ಐಟಂ.ನಂ.1 ರಿಂದ 3 ನೇ ಜಮೀನುಗಳ ಮೇಲೆ ಮಾತ್ರ ಹಕ್ಕು ಇದೆ ಎಂದರೆ ಸರಿಯಲ್ಲ.

17. 1 ಮತ್ತು 2 ನೇ ಪ್ರತಿವಾದಿಯರ ಸಂಬಂಧ ಅನ್ಯೂನ್ಯವಾಗಿಲ್ಲ ಎಂದರೆ ಸರಿ. ಆ ರೀತಿ ಯಾವ ವರ್ಷದಿಂದ ಅವರು ಅನ್ಯೂನ್ಯವಾಗಿಲ್ಲ ಎಂದು ನನ್ನಿಂದ ಹೇಳಲು ಆಗುವುದಿಲ್ಲ. ನಾನು 2013 ರಲ್ಲಿ ಬೋರ್ಡಿಂಗ್ ಶಾಲೆಗೆ ಹೋಗುವ ಮುನ್ನ ಎಲ್ಲರೂ ಒಟ್ಟಿಗೆ ಇದ್ದರಿಂದ ಯಾವ ಸಮಯದಿಂದ 1 ಮತ್ತು 2 ನೇ ಪ್ರತಿವಾದಿಗಳು ಅನ್ಯೂನ್ಯವಾಗಿಲ್ಲ ಎಂದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.